
# ಸೇವೆಯೆ ಸರ್ವಸ್ವ

## ನಮ್ಮನ್ನು ನಾವು ಪಡೆಯುವುದು

'ಆತ್ಮಪ್ರೀತಿಯೇ ಆತ್ಮಾರ್ಪಣೆಯ ಮೊದಲ ಗುರು' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಮೊದಲು ನಮ್ಮನ್ನು ನಾವು ಪ್ರೀತಿಸಬೇಕು, ನಮ್ಮ ಜೀವನವನ್ನು ಪ್ರೀತಿಸಬೇಕು. ಇದರ ಮೂಲಕ ನಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕು. ಮೊದಲು ನಮ್ಮನ್ನು ನಾವು ಪಡೆಯಬೇಕು. ಈಗ ನಾವು ನಿಜವಾಗಿಯೂ ನಾವಾಗಿಲ್ಲ. ವಸ್ತುಗಳೊಡನೆ, ವ್ಯಕ್ತಿಗಳೊಡನೆ, ಸ್ಥಾನಮಾನ ಅಧಿಕಾರಗಳೊಡನೆ, ಸಂಸ್ಥೆಗಳೊಡನೆ ನಮ್ಮನ್ನು ನಾವು ಒಂದಾಗಿಸಿಕೊಂಡು ನಮ್ಮನ್ನು ನಾವೇ ಕಳೆದುಕೊಂಡಿದ್ದೇವೆ. ಗುರ್ಡ್ಜಿಫ್ ಎಂಬಾತನು ನಮ್ಮಲ್ಲಿ ಎರಡು ಅಂಶಗಳಿವೆ ಎಂದು ಹೇಳುತ್ತಾನೆ. ಅವಾವುವೆಂದರೆ ವ್ಯಕ್ತಿತ್ವ (*personality*) ಮತ್ತು ಸಾರ (*essence*). ನಮ್ಮ ವ್ಯಕ್ತಿತ್ವವೇ ಬೇರೆ, ನಿಜವಾದ ಸಾರವೇ ಬೇರೆ. ಅನೇಕ ಸಾಮಾಜಿಕ ಅಂಶಗಳು ಸೇರಿ ನಮ್ಮ ವ್ಯಕ್ತಿತ್ವ ರೂಪಿತವಾಗಿದೆ. ಸಮಾಜಕ್ಕೆ ಅನುಗುಣವಾಗಿ ಬಾಳಲು ನಾವು ಎಷ್ಟೋ ರೀತಿನೀತಿಗಳನ್ನು ಬೆಳಸಿಕೊಳ್ಳುತ್ತೇವೆ. ಇದು ನಮ್ಮ ಜೀವನದ ಹೊರ ಪದರ. ಇದನ್ನು ಕಾರ್ಲ್ ಯುಂಗ್ *Persona* ಎಂದು ಕರೆಯುತ್ತಾನೆ. ಇದರ ಹಿಂದೆ ನಮ್ಮ ಯಥಾರ್ಥ ವ್ಯಕ್ತಿತ್ವ(ಸಾರ)ವಿದೆ. ಅದು ನಿಜವಾಗಿ ನಾವು ಏನಾಗಿರುವೆವೋ ಅದು. ನಾವು ಎಲ್ಲಿಯವರೆಗೆ ವ್ಯಕ್ತಿತ್ವಕ್ಕೆ ಅಂಟಿಕೊಂಡಿರುತ್ತೇವೆಯೊ ಅಲ್ಲಿಯವರೆಗೆ ನಾವು ನಾವಾಗಿರುವುದಿಲ್ಲ—ನಮ್ಮನ್ನು ನಾವು ಕಳೆದುಕೊಂಡಿರುತ್ತೇವೆ.



'ತನ್ನನ್ನು ತಾನೇ ಕಳೆದುಕೊಂಡು ವ್ಯಕ್ತಿಯು ಇಡೀ ಜಗತ್ತನ್ನೇ ಪಡೆದರೆ ತಾನೇ ಅದರಿಂದ ಏನು ಲಾಭ?' *ಏಸುಕ್ರಿಸ್ತ*

ಆದ್ದರಿಂದ ಮೊದಲು ನಮ್ಮನ್ನು ನಾವು ಪಡೆಯಬೇಕು. ಪ್ರಸಿದ್ಧ ಮನಶ್ಶಾಸ್ತ್ರಜ್ಞನೊಬ್ಬನು ಹೇಳುತ್ತಾನೆ: ಹುಚ್ಚನು (*lunatic*)ತಾನು ಅಬ್ರಹಾಂ ಲಿಂಕನ್ ಎಂದು ಹೇಳುತ್ತಾನೆ; ಮನೋರೋಗಿಯು (*neurotic*)ತಾನು ಅಬ್ರಹಾಂ ಲಿಂಕನ್ ಆಗಬೇಕು ಎನ್ನುತ್ತಾನೆ; ಆದರೆ ಯಥಾರ್ಥ ವ್ಯಕ್ತಿಯು (*authentic person*) 'ನಾನು ನಾನೇ, ನೀನು ನೀನೇ' ಎಂದು ಹೇಳುತ್ತಾನೆ. ಅವನು ಯಾವುದೇ ಕೃತಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಬಯಸುವುದಿಲ್ಲ—ತಾನೇ ತಾನಾಗಿರಲು ಬಯಸುತ್ತಾನೆ. ನಾವು ಇತರರಾಗಲು ಹೋಗಿ ನಮ್ಮನ್ನು ನಾವು ಕಳೆದುಕೊಳ್ಳುತ್ತೇವೆ. ಮೊದಲು ನಮ್ಮನ್ನು ನಾವು ಪಡೆಯದೆ ನಮ್ಮನ್ನು ಇತರರ ಸೇವೆಗೆ ಸಮರ್ಪಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಎಲ್ಲ ನೈತಿಕ, ಆಧ್ಯಾತ್ಮಿಕ ಸಾಧನೆಗಳೆಲ್ಲವೂ ನಮ್ಮನ್ನು ನಾವು ಪಡೆಯುವ ಹೋರಾಟ. ತ್ಯಾಗವೆಂದರೆ ನಮ್ಮಲ್ಲಿ ನಾವು ನೆಲೆ ನಿಲ್ಲುವ ಪ್ರಯತ್ನ. ಇದು ವೈಯಕ್ತೀಕರಣದ ಪ್ರಕ್ರಿಯೆ (*Process of individualisation*). ವೈಯಕ್ತೀಕರಣದ ನಂತರ ವಿಶ್ವೀಕರಣ (*Universalisation*)—ಅಂದರೆ ಇಡೀ ವಿಶ್ವದೊಡನೆ, ಮಾನವಕೋಟಿಯೊಡನೆ ಒಂದಾಗುವುದು. **ಈ ವಿಶ್ವೀಕರಣವೇ ಸೇವೆ.**

## ನಿಷ್ಪಕ್ಷಪಾತ ದೃಷ್ಟಿ

ನಾವು ನಮ್ಮಲ್ಲಿ ನೆಲೆ ನಿಂತಾಗ ಎಲ್ಲ ವಸ್ತುಗಳನ್ನೂ ವ್ಯಕ್ತಿಗಳನ್ನೂ ವಾಸ್ತವ ದೃಷ್ಟಿಯಿಂದ ನೋಡಲು ಸಾಧ್ಯವಾಗುತ್ತದೆ. ಆಗ ವ್ಯಕ್ತಿಗಳ ನಿಜವಾದ ಸುಖದುಃಖಗಳನ್ನು ನಿಷ್ಪಕ್ಷಪಾತವಾಗಿ ಭಾವಿಸಲು ಸಾಧ್ಯವಾಗುತ್ತದೆ. ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸಬಹುದು. ಒಂದು ನಾಟಕ ನಡೆಯುತ್ತಿದ್ದರೆ ನಾಟಕದ ಪಾತ್ರಧಾರಿಗಳಾಗಲಿ, ಬೇರೆ ರೀತಿಯಲ್ಲಿ ನಾಟಕದಲ್ಲಿ ಭಾಗವಹಿಸುವವರಿಗಾಗಲಿ ನಾಟಕದ ಬಗ್ಗೆ ತೀರ್ಪು ನೀಡಲು ಸಾಧ್ಯವಾಗುವುದಿಲ್ಲ. ನಾಟಕದಿಂದ ಬೇರೆಯಾಗಿ ನಿಷ್ಪಕ್ಷಪಾತವಾಗಿ ಅದನ್ನು ವೀಕ್ಷಿಸುವವರು ಅಭಿನಯದ ಬಗ್ಗೆ, ಕಥಾವಸ್ತುವಿನ ಬಗ್ಗೆ ಸರಿಯಾದ ರೀತಿಯಲ್ಲಿ ತೀರ್ಪು ನೀಡಬಲ್ಲರು. ನಾವು ಹೊರಜಗತ್ತಿನೊಂದಿಗೆ ತಾದಾತ್ಮ್ಯ ಹೊಂದಿದಾಗ ರಾಗದ್ವೇಷಾದಿಗಳಿಂದ ಕೂಡಿರುತ್ತೇವೆ. ಆಗ ವ್ಯಕ್ತಿಗಳ ಸುಖದುಃಖಗಳನ್ನು, ಕಷ್ಟನಷ್ಟಗಳನ್ನು ನಿಷ್ಪಕ್ಷಪಾತವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ನಿಜವಾದ ಭಾವದಿಂದ ಇತರರ ಸೇವೆ ಮಾಡಲೂ ಸಾಧ್ಯವಾಗುವುದಿಲ್ಲ. ಬೇಕಾದವರಿಗೆ ಮಾಡುತ್ತೇವೆ, ಇಲ್ಲದವರಿಗೆ ಇಲ್ಲ. ಸೇವೆ ಮಾಡಿದರೂ ಅದು ಸ್ವಾರ್ಥಪರವಾಗಿರುತ್ತದೆ. ತಾನೇ ತಾನಾಗಿರುವ, ತನ್ನಲ್ಲೇ ನೆಲೆ ನಿಂತಿರುವ ವ್ಯಕ್ತಿಗೆ ಯಾವ ಬೇಕು ಬೇಡಗಳೂ ಇರುವುದಿಲ್ಲ. ಅವನು ಜಗತ್ತಿನಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ಅವನು ಮಾತ್ರ ನಿಃಸ್ವಾರ್ಥ ದೃಷ್ಟಿಯಿಂದ ಸೇವೆ ಸಲ್ಲಿಸಬಲ್ಲನು.

## ಇತರರಲ್ಲಿ ತನ್ನನ್ನು ಕಾಣುವುದು

ಭೌತಿಕವಾದ, ಮಾನಸಿಕವಾದ, ಭಾವನಾತ್ಮಕವಾದ ತಾದಾತ್ಮ್ಯದಿಂದ ನಮ್ಮನ್ನು ಬಿಡಿಸಿಕೊಂಡು ನಮ್ಮಲ್ಲಿ ನಾವಿರುವುದು ವ್ಯಕ್ತೀಕರಣ. ಆಧ್ಯಾತ್ಮಿಕವಾಗಿ ಮತ್ತು ಇಡೀ ಮಾನವ ಕೋಟಿಯೊಡನೆ—ಕೆಲವರೊಡನೆ ಅಲ್ಲ—ತಾದಾತ್ಮ್ಯವನ್ನು ಪಡೆಯುವುದು ವಿಶ್ವೀಕರಣ. ಈಗ ವ್ಯಕ್ತಿಯು ಇತರರ ಸ್ಥಾನದಲ್ಲಿ ತನ್ನನ್ನು ಇರಿಸಿ

ಅವರ ಸುಖದುಃಖಗಳನ್ನು ಅರಿಯುವ, ಭಾವಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ. **ಆತ್ಮವತ್ ಸರ್ವಭೂತೇಷು** ಎಂಬ ಮಾತು ಅವನಿಗೆ ಅನ್ವಯವಾಗುತ್ತದೆ. ಶ್ರೀಮದ್ಭಗವದ್ಗೀತೆಯಲ್ಲಿಯೂ ಇದೇ ಮಾತು ಬರುತ್ತದೆ:

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ |**
**ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ||**

'ಎಲೈ ಅರ್ಜುನ, ಯಾವನು ಎಲ್ಲ ಪ್ರಾಣಿಗಳಲ್ಲಿಯೂ ಸುಖವನ್ನಾಗಲಿ ದುಃಖವನ್ನಾಗಲಿ ತನ್ನಂತೆಯೇ ಸಮವಾಗಿ ನೋಡುವನೊ ಆ ಯೋಗಿಯು ಶ್ರೇಷ್ಠನೆಂದು ನನ್ನ ಅಭಿಪ್ರಾಯ.'

ಆಗ ಅವನ ಇಡೀ ಜೀವನ ಸೇವಾಮಯವಾಗುತ್ತದೆ. ಅವನು ಏನೂ ಮಾಡದೆ ಸುಮ್ಮನೆ ಕುಳಿತಿದ್ದರೂ ಜಗತ್ತಿಗೆ ಸೇವೆ ಸಲ್ಲಿಸುತ್ತಿರುತ್ತಾನೆ. ಏಕೆಂದರೆ ಅವನು ತನಗಾಗಿ ಏನನ್ನೂ ಆಲೋಚಿಸುವುದೇ ಇಲ್ಲ. ಅವನಲ್ಲಿ ತಾನು ಎಂಬುದೇ ಇರುವುದಿಲ್ಲ. **ಅವನ ಮಾತು ಕೃತಿ ಆಲೋಚನೆಗಳೆಲ್ಲ ಪರಹಿತವನ್ನೇ ಉಂಟುಮಾಡುತ್ತವೆ.** ಇದು **ಅತ್ಯುನ್ನತ ಸೇವಾಭಾವ.** ಎಲ್ಲರೂ ತಾನು ಮಾತ್ರ ಸುಖವಾಗಿರಬೇಕು ಎಂದು ಭಾವಿಸಿದರೆ ಯಾರೂ ಸುಖವಾಗಿರಲು ಸಾಧ್ಯವಿಲ್ಲ. ಈ ಭಾವ ಸ್ಪರ್ಧೆಗೆ ಎಡೆಮಾಡಿಕೊಡುತ್ತದೆ. ಈ ಸ್ಪರ್ಧೆ ಘರ್ಷಣೆಯನ್ನು ಉಂಟುಮಾಡುತ್ತದೆ. ಇದರಿಂದ ಸ್ವಾಭಾವಿಕವಾಗಿಯೆ ಸಮಾಜದ ಸುಖಶಾಂತಿ ನಷ್ಟವಾಗುತ್ತದೆ. ಇದರ ಬದಲು ಇತರರು ಸುಖವಾಗಿರಲಿ ಎಂದು ಎಲ್ಲರೂ ಭಾವಿಸಿದರೆ ಆ ಭಾವನೆಯೇ ಮನಸ್ಸಿಗೆ ಎಷ್ಟೋ ಸುಖವನ್ನು ನೀಡುತ್ತದೆ ಮತ್ತು ಈ ಭಾವನೆ ಪರಸ್ಪರ ಪ್ರೀತಿ ಸಹಕಾರಕ್ಕೆ ಎಡೆಮಾಡಿಕೊಡುತ್ತದೆ. ಆಗ ಸಮಾಜದಲ್ಲಿ ಯಾವ ಘರ್ಷಣೆಯೂ ಇಲ್ಲದೆ ಸುಖಶಾಂತಿ ನೆಲೆಸುತ್ತದೆ. ಸಂಸ್ಕೃತದಲ್ಲಿ ಒಂದು ಸುಂದರವಾದ ಶ್ಲೋಕವಿದೆ:

**ಯೇ ಕೇಚಿತ್ ದುಃಖಿತಾ ಲೋಕೇ ಸರ್ವಂ ತೇ ಸ್ವಸುಖೇಚ್ಛಯಾ |**
**ಯೇ ಕೇಚಿತ್ ಸುಖಿತಾ ಲೋಕೇ ಸರ್ವಂ ತೇಽನ್ಯಸುಖೇಚ್ಛಯಾ ||**

'ತಾನು ಸುಖವಾಗಿರಬೇಕು ಎಂಬ ಇಚ್ಛೆಯೇ ಈ ಪ್ರಪಂಚದಲ್ಲಿರುವ ದುಃಖಕ್ಕೆಲ್ಲ ಕಾರಣ, ಮತ್ತು ಇತರರು ಸುಖವಾಗಿರಲಿ ಎಂಬ ಇಚ್ಛೆಯೇ ಪ್ರಪಂಚದಲ್ಲಿರುವ ಸುಖಕ್ಕೆಲ್ಲ ಕಾರಣ.'

### ಎರಡು ಬಗೆಯ ವ್ಯಕ್ತಿತ್ವ

ನಿಜವಾದ ಸೇವಾಮನೋಭಾವ ನಮಗೆ ಬರಬೇಕಾದರೆ ನಾವು ನಮ್ಮ ವ್ಯಕ್ತಿತ್ವದ ಪರಿಧಿಯನ್ನು ಮೀರಿ ಹೊರಬರಬೇಕಾಗುತ್ತದೆ. ನಮ್ಮಲ್ಲಿ ಎರಡು ಬಗೆಯ ವ್ಯಕ್ತಿತ್ವಗಳಿರುತ್ತವೆ. ಮೊದಲನೆಯದು ನಮ್ಮ ದೇಹ, ಇಂದ್ರಿಯ, ಮನಸ್ಸು, ಭಾವನೆಗಳಿಗೆ ಸೀಮಿತವಾದ ವೈಯಕ್ತಿಕ ವ್ಯಕ್ತಿತ್ವ. ಎರಡನೆಯದು ನಮ್ಮ ಉದ್ಯೋಗ, ಶಿಕ್ಷಣ, ಸ್ಥಾನ, ಅಧಿಕಾರ ಇತ್ಯಾದಿಗಳಿಗೆ ಸಂಬಂಧಿಸಿದ **ಸಾಮಾಜಿಕ ವ್ಯಕ್ತಿತ್ವ.** ನಮ್ಮ ವೈಯಕ್ತಿಕ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಆಹಾರ, ಇಂದ್ರಿಯಸುಖ, ಮಾನಸಿಕ ಸುಖ ಇತ್ಯಾದಿಗಳಿಗೆ ನಾವು ಅಂಟಿಕೊಂಡು ಸ್ವಾರ್ಥಿಗಳಾಗುತ್ತೇವೆ. ಸಾಮಾಜಿಕ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಹಣ, ಕೀರ್ತಿ, ಸಾಮಾಜಿಕ ಘನತೆ (*social prestige*), ಅಧಿಕಾರ ಲಾಲಸೆ ಇತ್ಯಾದಿಗಳಿಗೆ ಅಂಟಿಕೊಂಡು ಆಗಲೂ ಸ್ವಾರ್ಥಿಗಳಾಗುತ್ತೇವೆ. ನಾವು ಸ್ವಕೇಂದ್ರಿತರಾಗಿ ಎಲ್ಲವನ್ನೂ ನಮ್ಮೆಡೆಗೆ ಸೆಳೆದುಕೊಳ್ಳುವ ಪ್ರಯತ್ನ ಮಾಡುತ್ತೇವೆ. ಮೇಲಿನ ಶ್ಲೋಕದ ಪ್ರಕಾರ ಈ ಪ್ರವೃತ್ತಿಯೇ ಪ್ರಪಂಚದ ಎಲ್ಲ ದುಃಖಕ್ಕೂ ಕಾರಣ. ಇದರ ಬದಲು ನಾವು ನಮ್ಮ ಸೀಮಿತ ವ್ಯಕ್ತಿತ್ವದಿಂದ ಹೊರಬರಬೇಕು, **ನಮ್ಮ ವ್ಯಕ್ತಿತ್ವ ವಿಶ್ವವ್ಯಾಪಿಯಾಗಿ ವಿಕಾಸ ಹೊಂದಬೇಕು—ನಾವು ವಿಶ್ವಕುಟುಂಬಿಗಳಾಗಬೇಕು.** ಆಗ ನಾವೂ ಸುಖವನ್ನು ಅನುಭವಿಸಿ ಇತರರೆಲ್ಲರಿಗೂ ಸುಖವನ್ನು ನೀಡುತ್ತೇವೆ.

> **ತನ್ನ ಮತ್ತು ಇತರರ ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸುವುದಕ್ಕಾಗಿ ತನ್ನಾತ್ಮವನ್ನು ವಿಸ್ತಾರಗೊಳಿಸುವ ಇಚ್ಛೆಯೇ ಪ್ರೀತಿ.**
>
> ಎಂ.ಸ್ಕಾಟ್ ಪೆಕ್ (ಮನಶ್ಶಾಸ್ತ್ರಜ್ಞ)
> (*The Road Less Travelled*, p. 85)

ಮರವಾಗಿ ಬೆಳೆಯಬೇಕಾದ ಗಿಡವನ್ನು ಒಂದು ಕುಂಡದಲ್ಲಿ ಬೆಳೆಸಿದರೆ, ಅದು ಮರದ ಲಕ್ಷಣವನ್ನು ಪಡೆದಿದ್ದರೂ ಗಿಡವಾಗಿಯೇ ಉಳಿದಿರುತ್ತದೆ. ಅದು ಕೇವಲ ಅಲಂಕಾರಕ್ಕಾಗಿ ಮಾತ್ರ ಇರುತ್ತದೆ. ಅದೇ ಗಿಡವನ್ನು ಭೂಮಿಗೆ ಹಾಕಿದರೆ ಅದು ತನ್ನ ಬೇರುಗಳನ್ನು ವಿಸ್ತಾರವಾಗಿ ಬೆಳೆಸುತ್ತ ವಿಶಾಲವಾದ ಒಂದು ಬೃಹತ್ ವೃಕ್ಷವಾಗಿ ಬೆಳೆಯುತ್ತದೆ, ಹಾಗೂ ಅನೇಕರಿಗೆ, ಅನೇಕ ಪ್ರಾಣಿಗಳಿಗೆ ಸಹಾಯಕವಾಗುತ್ತದೆ. ಹಾಗೆಯೇ ಒಬ್ಬ ವ್ಯಕ್ತಿಯು ತನ್ನ ಸೀಮಿತ ವ್ಯಕ್ತಿತ್ವದ ಪರಿಧಿಯೊಳಗೇ ಇದ್ದರೆ ಅವನ ಬೆಳವಣಿಗೆ ಕುಂಠಿತವಾಗುತ್ತದೆ. ಅವನು ತಾನೂ ಬೆಳೆಯದೆ ಇತರರಿಗೆ ಪ್ರಯೋಜನವಾಗದೆ ಜೀವಚ್ಛವವಾಗಿ ಉಳಿಯುತ್ತಾನೆ. ಗಿಡದಂತೆ ಅವನು ಅಲಂಕಾರಪ್ರಾಯನೂ ಆಗಿರುವುದಿಲ್ಲ—ಭೂಷಣವಾಗಿರದೆ ಭೀಷಣನಾಗಿರುತ್ತಾನೆ. ಅದಕ್ಕೇ ಸ್ವಾಮಿ ವಿವೇಕಾನಂದರು ಹೇಳಿದುದು : '**ವಿಕಾಸವೇ ಜೀವನ, ಸಂಕೋಚವೇ ಮರಣ**' ಎಂದು.

### ವಸ್ತುನಿಷ್ಠ ಸೇವೆ

ಈ ರೀತಿಯ **ಆತ್ಮವಿಕಾಸವೇ ಸೇವೆಯ ತಳಹದಿ.** ಇದರಿಂದ ಸೇವೆ ನಮಗೆ ಸ್ವಾಭಾವಿಕವಾಗುತ್ತದೆ. ನಮ್ಮ ಜೀವನವೇ ಸೇವೆಯಾಗುತ್ತದೆ. **ಆತ್ಮವಿಕಾಸ ಹೊಂದದೆ ನಾವು ಮಾಡುವ ಸೇವೆಯು ಸ್ವಾರ್ಥಪರವಾಗಿರುತ್ತದೆ.** ಅನೇಕರು ಏನಾದರೂ ಸೇವೆ ಮಾಡಬೇಕಲ್ಲ ಎಂದು ಮಾಡುತ್ತಾರೆ. ಅವರಿಗೆ ಇತರರ ಆವಶ್ಯಕತೆಯ ಅರಿವು ಇರುವುದಿಲ್ಲ, ಇದ್ದರೂ ಅವರಿಗದು ಮುಖ್ಯವಲ್ಲ. ಅನೇಕರು ಪುಣ್ಯಫಲ ಸಂಪಾದನೆಗಾಗಿ ಸೇವೆ ಅಥವಾ ದಾನ ಮಾಡುತ್ತಾರೆ. ಸಾಧುಗಳಿಗೆ ಎಷ್ಟೇ ಬೇಡವೆಂದರೂ ಅನೇಕ ವಸ್ತುಗಳನ್ನು ತಂದುಕೊಡುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ **ಟೋಕನ್ ಸೇವೆ** ಮಾಡುತ್ತಾರೆ. ಇಲ್ಲಿ ನಿಜವಾದ ಸೇವಾ **ಮನೋಭಾವವನ್ನು ಕಾಣುವುದಿಲ್ಲ.** ಇಂಥವರ ಸೇವೆ ಅನೇಕ ವೇಳೆ

ನಾವು ಹೊರಗೆ ಹೋಗಿ ಇತರರಿಗೆ ಸಹಾಯ ಮಾಡುವುದು ಅತ್ಯುತ್ತಮವಾದುದೇನೊ ಸರಿ. ಆದರೂ ಪರಿಣಾಮದಲ್ಲಿ ಇತರರಿಗೆ ಸಹಾಯ ಮಾಡುವುದು ಎಂದರೆ ನಮಗೆ ನಾವೇ ಸಹಾಯ ಮಾಡಿಕೊಳ್ಳು ವುದೆಂಬುದನ್ನು ನಾವು ಕಂಡುಕೊಳ್ಳುತ್ತೇವೆ.

—ಸ್ವಾಮಿ ವಿವೇಕಾನಂದ

ಅಸೇವೆಯಾಗುತ್ತದೆ (*Service becomes disservice*). ಒಂದು ಮಂಗ ನದಿಯಲ್ಲಿರುವ ಮೀನುಗಳನ್ನೆಲ್ಲ ಹಿಡಿದು ಮರದ ಮೇಲೆ ಬಿಡುತ್ತಿತ್ತಂತೆ. 'ಇದೇನು ಮಾಡುತ್ತಿದ್ದೀಯೆ?' ಎಂದು ಯಾರೋ ಕೇಳಿದಾಗ, 'ನಾನು ಸೇವೆ ಮಾಡುತ್ತಿದ್ದೇನೆ' ಎಂದಿತು. 'ಇದಾವ ರೀತಿಯ ಸೇವೆ?' ಎಂದು ಪ್ರಶ್ನಿಸಿದಾಗ, 'ಪಾಪ, ಮೀನುಗಳು ನೀರಿನಲ್ಲಿ ಬಿದ್ದು ಒದ್ದಾಡುತ್ತಿವೆ. ಅವುಗಳನ್ನು ಎತ್ತಿ ಮರದ ಮೇಲೆ ಬಿಡುತ್ತಿದ್ದೇನೆ,' ಎಂದು ಮಂಗ ತನ್ನ ಸೇವಾ ಮನೋಭಾವವನ್ನು ವ್ಯಕ್ತಪಡಿಸಿತಂತೆ. ಇದೇ ಮಂಗನ ಸೇವೆ. ನಮ್ಮ ಸೇವೆಯೂ ಇಂತೆಯೇ ಇರುತ್ತದೆ. ನಮ್ಮ ವೈಯಕ್ತಿಕತೆಯನ್ನು ಮೀರಿ ವಾಸ್ತವ ದೃಷ್ಟಿಯನ್ನು ಬೆಳೆಸಿಕೊಳ್ಳದಿದ್ದರೆ ಇತರರ ಸ್ಥಿತಿಯನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಲಾರೆವು. ಈ ವಾಸ್ತವ ದೃಷ್ಟಿಯನ್ನು ಪಡೆಯುವುದು ನಾವೆಣಿಸುವಷ್ಟು ಸುಲಭವಲ್ಲ. ಅತ್ಯಂತ ವಸ್ತುನಿಷ್ಠ ವೈಜ್ಞಾನಿಕ ಸಿದ್ಧಾಂತಗಳೂ ವಿಜ್ಞಾನಿಯ ವೈಯಕ್ತಿಕ ಭಾವದಿಂದ ಪ್ರಭಾವ ಗೊಂಡಿರುತ್ತವೆ ಎಂದು ವಿಜ್ಞಾನಿಗಳೇ ಹೇಳುತ್ತಾರೆ. ಯಾವುದಾದರೂ ಮನಶ್ಶಾಸ್ತ್ರೀಯ ವಿಷಯವನ್ನು ಕಂಡುಹಿಡಿಯಲು ಮಂಗನ ಮೇಲೆ ಪ್ರಯೋಗ ನಡೆಸಿದರೆ ಆ ಪ್ರಯೋಗದ ಅಂತಿಮ ತೀರ್ಪು ಮನಶ್ಶಾಸ್ತ್ರಜ್ಞನು ಮಂಗನನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾನೆ ಅಥವಾ ದ್ವೇಷಿಸುತ್ತಾನೆ ಎಂಬುದನ್ನು ಸ್ವಲ್ಪಮಟ್ಟಿಗಾದರೂ ಅವಲಂಬಿಸಿರುತ್ತದೆ ಎಂದು ಅಬ್ರಹಾಂ ಮಾಸ್ಲೊ ಹೇಳುತ್ತಾನೆ.

## ನಾವಿದ್ದಲ್ಲಿಯೇ ಸೇವೆ ಮಾಡಬಹುದು

ನಾವು ಮೇಲೆ ಬಿದ್ದು ಮುನ್ನುಗ್ಗಿ ಹೋಗಿ ಸಮಾಜಸೇವೆ ಮಾಡುವ ಆವಶ್ಯಕತೆಯಿಲ್ಲ. ಕೆಲವರು ಅರಸಿಕೊಂಡು ಹೋಗಿ ಸೇವೆ ಮಾಡು ತ್ತಾರೆ. ಇದು ಅನೇಕ ವೇಳೆ ವ್ಯಕ್ತಿತ್ವವನ್ನು ಮೆರೆಸುವುದಾಗುತ್ತದೆ—ಅಹಂಕಾರ ಪ್ರದರ್ಶನವಾಗುತ್ತದೆ—ಅಥವಾ ಒಂದು ಸಾಮಾಜಿಕ ಘನತೆಯನ್ನು ಪಡೆಯುವುದಕ್ಕಾಗಿರುತ್ತದೆ. ಅಂಥವರು ಸಾಮಾನ್ಯವಾಗಿ ತಮ್ಮ ಪ್ರಸ್ತುತ ಕರ್ತವ್ಯವನ್ನು ಕಡೆಗಣಿಸಿ ಇತರರ ಸೇವೆಯಲ್ಲಿ ಮುಂದಾಗುತ್ತಾರೆ, ತಮ್ಮ ಸುತ್ತಮುತ್ತಲಿರುವವರನ್ನು, ತಮ್ಮ ಹತ್ತಿರದವರನ್ನು ಅವರು ಕಡೆಗಣಿಸುತ್ತಾರೆ. 'ಮನೆಗೆ ಮಾರಿ ಪರರಿಗೆ ಉಪಕಾರಿ' ಎಂಬಂತಿರುತ್ತಾರೆ. ಆದ್ದರಿಂದಲೇ ಇಂಗ್ಲಿಷ್‌ನಲ್ಲಿ '*Charity begins at home*' (ಸೇವೆ ತಾನಿದ್ದಲ್ಲಿಂದಲೇ ಪ್ರಾರಂಭ ವಾಗಬೇಕು) ಎಂಬ ಮಾತಿದೆ. ಸಮಾಜಸೇವೆ ಮಾಡುವುದು, ಇತರರ ಸೇವೆ ಮಾಡುವುದು ಎಂದರೆ ವಿದ್ಯಾಸಂಸ್ಥೆಗಳನ್ನು ಕಟ್ಟುವುದಾಗಲಿ, ಆಸ್ಪತ್ರೆಗಳನ್ನು ನಿರ್ಮಿಸುವುದಾಗಲಿ ಅಲ್ಲ. ಇದನ್ನು ಎಲ್ಲರೂ ಮಾಡ ಲಾಗುವುದಿಲ್ಲ. ನಾವು ನಮ್ಮ ನಮ್ಮ ಸ್ಥಾನದಲ್ಲಿ ಇದ್ದುಕೊಂಡು ನಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ನಿಷ್ಠೆಯಿಂದ, ದಕ್ಷತೆಯಿಂದ ಮಾಡಿ ಮುಗಿಸಿದರೆ ಇದರಿಂದ ಸಮಾಜಕ್ಕಾಗುವ ಸೇವೆ ಮತ್ತಾವುದ ರಿಂದಲೂ ಆಗುವುದಿಲ್ಲ. ಪ್ರತಿಯೊಬ್ಬರಿಗೂ ಸೇವೆಯ ಅವಕಾಶವಿದೆ. ಕರ್ತವ್ಯಪರಿಪಾಲನೆಯ ಮೂಲಕವೇ ಇತರರಿಗೆ ಎಷ್ಟೋ ಸೇವೆ ಸಲ್ಲಿಸಿದಂತಾಗುತ್ತದೆ. ನಮ್ಮ ವ್ಯಕ್ತಿತ್ವವನ್ನು ಸರಿಯಾಗಿ ರೂಪಿಸಿಕೊಂಡು ಜನರೊಡನೆ ಪ್ರೀತಿ ವಿಶ್ವಾಸದಿಂದ ವ್ಯವಹರಿಸಿದರೆ ಅದೇ ದೊಡ್ಡ ಸೇವೆಯಾಗುತ್ತದೆ. ಸತ್ಯ ಪ್ರಾಮಾಣಿಕತೆಗಳಿಂದ ನಡೆದುಕೊಂಡರೆ ಅದರಿಂದಲೂ ಸೇವೆ ಸಲ್ಲಿಸಿದಂತಾಗುತ್ತದೆ. ಪ್ರೀತಿ ಸಹಾನುಭೂತಿಯ ನುಡಿಗಳ ಮೂಲಕವೇ ಎಷ್ಟೋ ಸೇವೆಯನ್ನು ಸಲ್ಲಿಸಬಹುದು.

ಸದ್ಭಾವನೆಗಳ ಮೂಲಕವೂ ಪ್ರಾರ್ಥನೆಯ ಮೂಲಕವೂ ನಾವು ಇತರರಿಗೆ ಬಹಳಷ್ಟು ಸೇವೆಯನ್ನು ಸಲ್ಲಿಸಬಹುದು. ನಮ್ಮ ಆಲೋಚನೆಗಳ ಮೂಲಕ, ನಮ್ಮ ವ್ಯಕ್ತಿತ್ವದ ಮೂಲಕ ನಮ್ಮ ಸುತ್ತಲಿನ ವಾತಾವರಣವನ್ನೇ ಬದಲಾಯಿಸಬಹುದು. ಒಂದು ಕುಟುಂಬವನ್ನು ಅಥವಾ ಸಂಸ್ಥೆಯನ್ನು ಕೆಡಿಸಲು ಅಥವಾ ಉತ್ತಮಗೊಳಿಸಲು ಒಬ್ಬ ವ್ಯಕ್ತಿಯಿಂದ ಸಾಧ್ಯ.

## ಪರಸೇವೆಯಿಂದ ಸ್ವಸೇವೆ

ನಾವು ಇತರರ ಸೇವೆ ಮಾಡುವುದರಿಂದ ನಮ್ಮ ಸೇವೆಯನ್ನೇ ನಾವು ಮಾಡಿಕೊಂಡಂತಾಗುತ್ತದೆ. ಸಹಾಯ ಯಾವಾಗಲೂ ಒಮ್ಮುಖವಲ್ಲ. ನಿಃಸ್ವಾರ್ಥ ಸೇವೆಯ ಮೂಲಕ ನಾವೂ ಬೆಳೆಯುತ್ತೇವೆ. ಇತರರ ಸೇವೆ ನಮಗೊಂದು ಸದವಕಾಶ. ಯಾರಿಗೆ ನಾವು ಸೇವೆ ಸಲ್ಲಿಸುತ್ತೇವೆಯೊ ಅವರಿಂದ ಕೃತಜ್ಞತೆಯನ್ನು ನಿರೀಕ್ಷಿಸುವ ಬದಲು ಅವರಿಗೇ ನಾವು ಕೃತಜ್ಞರಾಗಿರಬೇಕು. ಸೇವೆ ಯಿಂದ ಆಧ್ಯಾತ್ಮಿಕ ಬೆಳವಣಿಗೆಯಾಗುವುದು ಮಾತ್ರವಲ್ಲದೆ ನಮ್ಮ ವ್ಯಾವಹಾರಿಕ ಸುಸ್ಥಿತಿಗೂ ಸೇವೆ ಆವಶ್ಯಕ. ನಮ್ಮ ಸಾಮಾಜಿಕ ಪರಿಸರವನ್ನು ನೈತಿಕವಾಗಿಯೂ ಭೌತಿಕವಾಗಿಯೂ ಉತ್ತಮ ಸ್ಥಿತಿ ಯಲ್ಲಿರಿಸುವುದು ನಮ್ಮ ಸುಖ ಜೀವನಕ್ಕೇ ಆವಶ್ಯಕ. ಸಮಾಜವನ್ನು ಉತ್ತಮ ಸ್ಥಿತಿಯಲ್ಲಿರಿಸುವುದು ನಮ್ಮೆಲ್ಲರ ಹೊಣೆ. ಈ ರೀತಿಯ ಸಮಾಜ ಸೇವೆಯಿಂದ ನಮ್ಮ ಸೇವೆಯನ್ನೇ ನಾವು ಮಾಡಿ ಕೊಂಡಂತಾಗುತ್ತದೆ. ರೈತನೊಬ್ಬನು ಪ್ರತಿ ವರ್ಷವೂ ಉತ್ತಮ ಬೀಜದ ಉತ್ಪತ್ತಿಗಾಗಿ ಪ್ರಥಮ ಬಹುಮಾನವನ್ನು ಪಡೆಯುತ್ತಿದ್ದ. ಅವನು ಇತರ ರೈತರಿಗೆ ಕೃಷಿಮಾಡಲು ಉತ್ತಮ ಬೀಜವನ್ನೇ ನೀಡುತ್ತಿದ್ದ. ಅವರಿಗೇಕೆ ಕಳಪೆ ಬೀಜವನ್ನು ನೀಡದೆ ಉತ್ತಮ ಬೀಜವನ್ನು ನೀಡುತ್ತೀಯೆ, ಎಂದು ಕೇಳಿದಾಗ : 'ನಾನು ಅವರಿಗೆ ಬೆಳೆ ಬೆಳೆಯಲು ಕಳಪೆ ಬೀಜವನ್ನು ನೀಡಿದರೆ *cross polination* (ಮಿಶ್ರ ಪರಾಗಸ್ಪರ್ಶದ) ಮೂಲಕ ನನ್ನ ಹೊಲದ ಬೀಜವೂ ಕ್ರಮೇಣ ಕಳಪೆಯಾಗುತ್ತದೆ.' ಇದು ಸಮಾಜದ ಎಲ್ಲ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ನಮ್ಮ ಭ್ರಷ್ಟಜೀವನದ ಮೂಲಕ ಇಡೀ ಸಮಾಜವನ್ನೇ ವಿಷಪೂರಿತಗೊಳಿಸಿ ನಮಗೂ ನಮ್ಮ ಮುಂದಿನ ಪೀಳಿಗೆಯವರಿಗೂ ಜೀವನ ದುಃಖಮಯವಾಗುವಂತೆ ಮಾಡುತ್ತೇವೆ. ಕೇವಲ ನಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳು ವುದರ ಮೂಲಕವೇ ನಾವು ಸಮಾಜಕ್ಕೆ ಎಷ್ಟೊಂದು ಸೇವೆ ಸಲ್ಲಿಸ ಬಹುದು ಎಂಬುದು ಇದರಿಂದ ಅರ್ಥವಾಗುತ್ತದೆ. ✷